ಸಂ.ಎಲ್.ಎನ್.ಡಿ.: 87 /2010-11

ತಹಸೀಲ್ದಾರ್‌ರವರ ಕಾರ್ಯಾಲಯ,
ಆಲೂರು, ದಿನಾಂಕ: 09-11-2010.

## ಅಧಿಕೃತ ಜ್ಞಾಪನ

ವಿಷಯ:- ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯ ಪಡೆ ರಚನೆ ತಾಲ್ಲೂಕು ಮಟ್ಟದ ಕಾರ್ಯಪಡೆ/ಪ್ರಾಧಿಕಾರ ರಚನೆ ಇನ್ನು ಕೆಲವು ಅಧಿಕಾರಿಗಳನ್ನು ಸದಸ್ಯರನ್ನಾಗಿ ಪ್ರಾಧಿಕಾರಕ್ಕೆ ಸೇರಿಸಿಕೊಳ್ಳುವ ಕುರಿತು

ಉಲ್ಲೇಖ:- ಈ ಕಛೇರಿಯ ಸಮಸಂಖ್ಯೆ ಅ.ಜ್ಞಾ.ಪ. ದಿನಾಂಕ: 19-08-2010

******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಅ.ಜ್ಞಾ.ಪತ್ರದಲ್ಲಿ ಸರ್ಕಾರದ ಮತ್ತು ಮಾನ್ಯ ಜಿಲ್ಲಾಧಿಕಾರಿಗಳ ಕ್ರಮವಾಗಿ ಆದೇಶ ದಿನಾಂಕ 19-09-2009 ಮತ್ತು ದಿನಾಂಕ 20-01-2010 ರ ಪತ್ರದಂತೆ ತಹಸೀಲ್ದಾರ್‌ರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಪ್ರಾಧಿಕಾರ ರಚಿಸಿ ಇಲಾಖೆಯ ಅಧಿಕಾರಿಗಳನ್ನು ಸದಸ್ಯರನ್ನಾಗಿ ನೇಮಿಸಲಾಗಿತ್ತು.

ದಿನಾಂಕ: 18-10-2010 ರಂದು ಉಪ ವಿಭಾಗಾಧಿಕಾರಿಗಳು, ಸಕಲೇಶಪುರ ಸಕಲೇಶಪುರ ರವರು ಸಕಲೇಶಪುರದಲ್ಲಿ ನಡೆದ ಉಪವಿಭಾಗದ ಕಂದಾಯ ಅಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಈ ಪ್ರಾಧಿಕಾರಿಕ್ಕೆ ಪೊಲೀಸ್ ಇಲಾಖೆ ಸೇರಿದಂತೆ ಉಳಿದ ಇತರೆ ಇಲಾಖೆಗಳ ಅಧಿಕಾರಿಗಳನ್ನು ಸದಸ್ಯರನ್ನಾಗಿ ನೇಮಿಸಿಕೊಳ್ಳಲು ಸೂಚಿಸಿರುತ್ತಾರೆ. ಅಂತೆಯೇ ಆಲೂರು ತಾಲೂಕು ಮಟ್ಟದ ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆಯ ಪ್ರಾಧಿಕಾರವನ್ನು ಈ ಕೆಳಕಂಡಂತೆ ಪುನರ್ ರಚಿಸಿ ಆದೇಶಿಸಿದೆ.

### ಆಲೂರು ತಾಲ್ಲೂಕು ಮಟ್ಟದ ಪ್ರಾಧಿಕಾರ

| | | |
|---|---|---|
| 1 | ತಹಸೀಲ್ದಾರ್, ಆಲೂರು ತಾಲ್ಲೂಕು. | ಅಧ್ಯಕ್ಷರು |
| 2 | ವಲಯ ಅರಣ್ಯಾಧಿಕಾರಿಗಳು, ಬೈರಾಪುರ ವಲಯ, ಆಲೂರು. | ಸದಸ್ಯರು |
| 3 | ಸಹಾಯಕ ಕಾರ್ಯಪಾಲಕ ಅಭಿಯಂತರರು , ಲೋಕಪಯೋಗಿ ಇಲಾಖೆ | ಸದಸ್ಯರು |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿಯರಿಂಗ್ ಇಲಾಖೆ. | ಸದಸ್ಯರು |
| 5 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ಮತ್ತು ಹೆಚ್.ಆರ್.ಪಿ, ಗೊರೂರು ಮತ್ತು ವಾಟೇಹೊಳೆ ಉಪವಿಭಾಗ, ಆಲೂರು | ಸದಸ್ಯರು |
| 6 | ತಾಲ್ಲೂಕು ಆರೋಗ್ಯಾಧಿಕಾರಿ, ಆರೋಗ್ಯ ಇಲಾಖೆ, ಆಲೂರು | ಸದಸ್ಯರು |
| 7 | ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಣ ಇಲಾಖೆ, ಆಲೂರು. | ಸದಸ್ಯರು |
| 8 | ಕಾರ್ಯನಿರ್ವಾಹಕಾಧಿಕಾರಿಗಳು, ತಾಲೂಕು ಪಂಚಾಯಿತಿ. ಆಲೂರು | ಸದಸ್ಯರು |
| 9 | ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಆಲೂರು | ಸದಸ್ಯರು |
| 10 | ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ಆಲೂರು | ಸದಸ್ಯರು |
| 11 | ತಾಲ್ಲೂಕು ಸಮಾಜಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಆಲೂರು. | ಸದಸ್ಯರು |
| 12 | ಸಹಾಯಕ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಆಲೂರು | ಸದಸ್ಯರು |
| 13 | ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಆಲೂರು | ಸದಸ್ಯರು |
| 14 | ವೃತ್ತ ನಿರೀಕ್ಷಕರು, ಆರಕ್ಷಕ ಠಾಣೆ, ಆಲೂರು | ಸದಸ್ಯರು |
| 15 | ವಿಸ್ತೀರ್ಣಾಧಿಕಾರಿಗಳು, ರೇಷ್ಮೆ ಇಲಾಖೆ, ಆಲೂರು | ಸದಸ್ಯರು |

ಪ್ರಾಧಿಕಾರವು ಈ ಕೆಳಕಂಡ ಅಂಶಗಳ ಬಗ್ಗೆ ಕಾರ್ಯನಿರ್ವಹಿಸತಕ್ಕದ್ದು.

1. ಇಲಾಖಾ ವ್ಯಾಪ್ತಿಗೆ ಒಳಪಟ್ಟ ಸರ್ಕಾರಿ ಭೂಮಿ ಪತ್ತೆ ಹಚ್ಚುವುದು.
2. ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸುವುದು. ಮತ್ತು ಸಂರಕ್ಷಿಸಿರುವುದು.
3. ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಾಲಂ 192 (ಎ) ರಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸುವುದು. ಇತ್ಯಾದಿ.

ತಹಸೀಲ್ದಾರ್
ಆಲೂರು ತಾಲ್ಲೂಕು

ಪ್ರತಿಯನ್ನು:-

1. ಸಂಬಂಧಿಸಿದ ಅಧಿಕಾರಿಗಳಿಗೆ,
2. ಮಾನ್ಯ ಜಿಲ್ಲಾಧಿಕಾರಿಗಳು ಹಾಸನ ರವರಿಗೆ ಸಲ್ಲಿಸಿದೆ.
3. ಮಾನ್ಯ ಉಪವಿಭಾಗಾಧಿಕಾರಿಗಳು, ಸಕಲೇಶಪುರ ಉಪವಿಭಾಗ, ಸಕಲೇಶಪುರ ರವರಿಗೆ ಸಲ್ಲಿಸಿದೆ.

ತಹಸೀಲ್ದಾರ್,
ಆಲೂರು ತಾಲ್ಲೂಕು.